# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1. | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1030 (1243) |
| 2. | ಸದಸ್ಯರ ಹೆಸರು | : | ಶ್ರೀ.ಎನ್.ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| 3. | ಉತ್ತರಿಸಬೇಕಾದ ದಿನಾಂಕ | : | 17-03-2020 |
| 4. | ಉತ್ತರಿಸುವ ಸಚಿವರು | : | ಮಾನ್ಯ ನಗರಾಭಿವೃದ್ಧಿ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಕೇಂದ್ರ ಸರ್ಕಾರದ ಯೋಜನೆ ಹೃದಯ್ ಅಡಿಯಲ್ಲಿ ಕೈಗೊಂಡಿರುವ ಪುರಾತತ್ವ/ ಪ್ರಾಚೀನ ಪ್ರಾಮುಖ್ಯತೆವುಳ್ಳ ಸ್ಥಳಗಳು ಯಾವುವು: ಪೂರ್ಣ ಮಾಹಿತಿ ನೀಡುವುದು: | ರಾಜ್ಯದಲ್ಲಿ ಕೇಂದ್ರ ಸರ್ಕಾರದ ಯೋಜನೆ ಹೃದಯ್ ಅಡಿಯಲ್ಲಿ ಬಾದಾಮಿ ಪಟ್ಟಣ ಮಾತ್ರ ಆಯ್ಕೆಯಾಗಿರುತ್ತದೆ.<br><br>ಇದು ಕೇಂದ್ರ ಸರ್ಕಾರದ ಯೋಜನೆಯಾಗಿದ್ದು, ಶೇಕಡ 100 ಅನುದಾನವನ್ನು ಕೇಂದ್ರ ಸರ್ಕಾರವು ನೇರವಾಗಿ ಬದಾಮಿ ಪುರಸಭೆಗೆ ಬಿಡುಗಡೆ ಮಾಡುತ್ತದೆ. ಈ ಯೋಜನೆಯಡಿಯಲ್ಲಿ ಕೈಗೊಳ್ಳಲು ಉದ್ದೇಶಿಸಿರುವ ಕಾಮಗಾರಿಗಳಿಗೆ ತಾಂತ್ರಿಕ ಅನುಮೋದನೆಯನ್ನು ಕೇಂದ್ರ ನಗರಾಭಿವೃದ್ಧಿ ಇಲಾಖೆಯಲ್ಲಿ ರಚಿತವಾಗಿರುವ ತಾಂತ್ರಿಕ ಸಮಿತಿಯು ನೀಡಿದ್ದು: ಬಾದಾಮಿ ಪುರಸಭೆಯು ಸಾರ್ವಜನಿಕ ಟೆಂಡರ್ ಪ್ರಕ್ರಿಯೆ ಮೂಲಕ ಕಾಮಗಾರಿಗಳ ಅನುಷ್ಠಾನವನ್ನು ಕೈಗೊಂಡಿರುತ್ತದೆ. |
| ಆ) | ಈ ಯೋಜನೆಯಡಿಯಲ್ಲಿ ಕಲ್ಪಿಸಲಾಗುವ ಮೂಲಭೂತ ಸೌಕರ್ಯಗಳು ಮತ್ತು ಇತರೆ ಕಾರ್ಯಕ್ರಮಗಳು ಯಾವುವು: | ಬಾದಾಮಿ ಪುರಸಭೆಯ ವ್ಯಾಪ್ತಿಯಲ್ಲಿ "ಹೃದಯ್" ಯೋಜನೆಯಡಿಯಲ್ಲಿ ಕೈಗೊಂಡಿರುವ ಮೂಲಭೂತ ಸೌಕರ್ಯ ಮತ್ತು ಇತರೆ ಕಾರ್ಯಕ್ರಮಗಳು ಈ ಕೆಳಗಿನಂತಿವೆ:<br><br>1. ಬಾದಾಮಿ ಪಟ್ಟಣದ ತಟಕೋಟಿ ಗ್ರಾಮದ ನೀರು ಅಗಸ್ತ್ಯ ತೀರ್ಥ ಹೊಂಡಕ್ಕೆ ಸೇರದಂತೆ ಒಳಚರಂಡಿ ಕಾಮಗಾರಿ.<br>2. ಬಾದಾಮಿ ಪಟ್ಟಣದಲ್ಲಿ ಬರುವ ಪಾರಂಪರಿಕ ಜಾಗಗಳಿಗೆ ಹೋಗಲು ಬಳಸುವ ರಸ್ತೆಗಳ ಅಭಿವೃದ್ಧಿ, ಪುಟ್‌ಪಾತ್, ರೇಲಿಂಗ್, ಬೀದಿದೀಪಗಳು, ರಸ್ತೆ ಬದಿಗೆ ಮರ ನೆಡುವುದು, ಶೌಚಾಲಯ ಸಂಕೀರ್ಣ, ಇ-ಶೌಚಾಲಯ, ಬ್ಯಾಂಡ ಸ್ಟ್ಯಾಂಡ್‌ಗಳು ಹಾಗೂ ಮುಖ್ಯ ರಸ್ತೆಗಳಿಗೆ ಪಾರಂಪರಿಕ ರೀತಿಯ ಸ್ವಾಗತ ಕಮಾನುಗಳು.<br>3. ಬಾದಾಮಿ ಪಟ್ಟಣಕ್ಕೆ ಶೂನ್ಯ ತ್ಯಾಜ್ಯ ಘಟಕ ನಿರ್ಮಾಣ ಹಾಗೂ ಅದಕ್ಕೆ ಪೂರಕವಾಗಿ ಬ್ಯಾಟರಿ ಚಾಲಿತ ರಿಕ್ಷಾಗಳು, ಮಶಿನೆರಿಗಳು ಮತ್ತು ಬಯೋ ಗ್ಯಾಸ್ ಘಟಕ ನಿರ್ಮಾಣ. |

| | | |
|---|---|---|
| ಇ) | ಈ ಸ್ಥಳದಲ್ಲಿ ಮೂಲಭೂತ ಸೌಕರ್ಯಗಳು ಮತ್ತು ಇತರೆ ಕಾರ್ಯಕ್ರಮಗಳನ್ನು ರೂಪಿಸಲು ಇದುವರೆಗೂ ಕೇಂದ್ರ ಸರ್ಕಾರದಿಂದ ಬಂದಿರುವ ಮತ್ತು ಖರ್ಚಾಗಿರುವ ಅನುದಾನವೆಷ್ಟು: | "ಹೃದಯ್" ಯೋಜನೆಯಡಿ ಬಾದಾಮಿ ಪುರಸಭೆಗೆ ಕೇಂದ್ರ ಸರ್ಕಾರದಿಂದ ಈವರೆಗೆ ರೂ.18.76 ಕೋಟಿ ಅನುದಾನ ಬಿಡುಗಡೆಯಾಗಿದ್ದು, ಈ ಪೈಕಿ ಪ್ರಸ್ತುತ ರೂ.10.10 ಕೋಟಿ ವೆಚ್ಚವಾಗಿದೆ. ಈ ಯೋಜನೆಯಲ್ಲಿ ಕೈಗೊಂಡಿರುವ ಕಾಮಗಾರಿಗಳ ವಿವರ ಹಾಗೂ ಇತ್ತೀಚಿನ ಪ್ರಗತಿಯ ಹಂತವನ್ನು **ಅನುಬಂಧ – 1 ರಲ್ಲಿ** ನೀಡಿದೆ. |
| ಈ) | ಮಂಡ್ಯ ಜಿಲ್ಲೆಯಲ್ಲಿ ಶ್ರೀರಂಗಪಟ್ಟಣ ಮತ್ತು ಮೇಲುಕೋಟೆ ಮಹತ್ವವುಳ್ಳ ಸ್ಥಳಗಳಾಗಿದ್ದು ಈ ಸ್ಥಳಗಳನ್ನು ಹೃದಯ್ (HRIDAY) ಯೋಜನೆಯಡಿಯಲ್ಲಿ ಸೇರಿಸಲು ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದೆಯೇ: ಹಾಗಿದ್ದಲ್ಲಿ, ಪೂರ್ಣ ಮಾಹಿತಿ ನೀಡುವುದು? | ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣವನ್ನು "ಹೃದಯ್" ಯೋಜನೆಗೆ ರೂ.41.66 ಕೋಟಿ ಅನುದಾನದಲ್ಲಿ ಸೇರ್ಪಡೆ ಮಾಡಲು ಕೇಂದ್ರ ಸರ್ಕಾರಕ್ಕೆ ದಿನಾಂಕ: 22-12-2017 ರಂದು ರಾಜ್ಯ ಸರ್ಕಾರದಿಂದ ಪ್ರಸ್ತಾವನೆ ಸಲ್ಲಿಸಲಾಗಿದೆ **(ಪತ್ರದ ಪ್ರತಿಯನ್ನು ಅನುಬಂಧ–2 ರಲ್ಲಿ ನೀಡಿದೆ)**. ಆದರೆ ಈವರೆಗೆ ಕೇಂದ್ರ ಸರ್ಕಾರದಿಂದ ಈ ಪ್ರಸ್ತಾವನೆಗೆ ಸಕಾರತ್ಮಕ ಪ್ರತಿಕ್ರಿಯೆ ಬಂದಿರುವುದಿಲ್ಲ. ಮುಂದುವರೆದು ಮೇಲುಕೋಟೆ ಪಟ್ಟಣವನ್ನು "ಹೃದಯ್" ಯೋಜನೆಯಡಿಯಲ್ಲಿ ಸೇರಿಸಲು ಯಾವುದೇ ಪ್ರಸ್ತಾವನೆಯನ್ನು ಪ್ರಸ್ತುತದಲ್ಲಿ ಸಲ್ಲಿಸಿರುವುದಿಲ್ಲ. |

ಕಡತ ಸಂಖ್ಯೆ: ನಅಇ 85 ಪಿ.ಆರ್.ಜೆ 2020

**(ಬಿ.ಎ. ಬಸವರಾಜ)**
ನಗರಾಭಿವೃದ್ಧಿ ಸಚಿವರು.

## ಅನುಬಂಧ – 1

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: | 1030 (1243)<br>ಸಮ್ಮೂಹ II |
| ಮಾನ್ಯ ಸದಸ್ಯರ ಹೆಸರು: | ಶ್ರೀ. ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಯಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ: | 17-03-2020 |
| ಉತ್ತರಿಸಬೇಕಾದ ಸಚಿವರು: | ಮಾನ್ಯ ನಗರಾಭಿವೃದ್ಧಿ ಸಚಿವರು |

**I. ಬದಾಮಿ ಪುರಸಭೆ ವತಿಯಿಂದ ಅನುಷ್ಠಾನಗೊಳ್ಳುತ್ತಿರುವ ಕಾಮಗಾರಿಗಳ ವಿವರ:**

| ಕ್ರ. ಸಂ. | ಯೋಜನೆಯ ಹೆಸರು | ಉಪ ಕಾಮಗಾರಿಯ ಹೆಸರು | ಟೆಂಡರ ಅಗ್ರಿಮೆಂಟ ಮೊತ್ತ | ಗುತ್ತಿಗೆದಾರರ ಹೆಸರು | ಕೆಲಸದ ಆದೇಶದ ದಿನಾಂಕ | ಕಾಮಗಾರಿಯು ಮುಕ್ತಾಯವಾಗ ಬೇಕಾದ ದಿನಾಂಕ | ಕಾಮಗಾರಿಯು ಮುಕ್ತಾಯವಾದ/ ಮುಕ್ತಾಯ ವಾಗಬಹುದಾದ ದಿನಾಂಕ | ಆರ್ಥಿಕ ಪ್ರಗತಿ | ಭೌತಿಕ ಪ್ರಗತಿ | ವಿಳಂಬಕ್ಕೆ ಕಾರಣ |
|---|---|---|---|---|---|---|---|---|---|---|
| 1 | 2 | 3 | 6 | 7 | 8 | 9 | 10 | 11 | 12 | 13 |
| 1 | **ಹಳೆ ಬಾದಾಮಿ ಪಟ್ಟಣದ ಒಳಚರಂಡಿ ಕಾಮಗಾರಿ** | ತಟಕೋಟೆ ಒಳಚರಂಡಿ ಕಾಮಗಾರಿ | 42.30 ಲಕ್ಷ | ಜಿ.ಕೃಷ್ಣಮೋಹನ ವಿದ್ಯಾನಗರ ಬಾಗಲಕೋಟ | 18.04.2017 | 17.01.2018 | 07.02.2019 | **28.80 ಲಕ್ಷಗಳು** | **100%** | ಭಾರತೀಯ ಪುರಾತತ್ವ ಇಲಾಖೆಯಿಂದ ಪರವಾಣಿಗೆ ಪಡೆಯಬೇಕಾಯಿತು, ಇದ್ದ ಒಂದೇ ಚಿಕ್ಕ ದಾರಿಯಲ್ಲಿ ಆಳವಾದ ಬಂಡೆಗಲ್ಲು ಬಂದಿದ್ದು ಕೆಲಸ ವಿಳಂಬ ಆಯಿತು. ಗುತ್ತಿಗೆದಾರರ ವಿಳಂಬಕ್ಕೆ ರೂ.0.38 ಲಕ್ಷ ಎಲ್ ಡಿ ಹಾಕಲಾಗಿದೆ. |

| ಕ್ರ. ಸಂ. | ಯೋಜನೆಯ ಹೆಸರು | ಉಪ ಕಾಮಗಾರಿಯ ಹೆಸರು | ಟೆಂಡರ ಅಗ್ರಿಮೆಂಟ ಮೊತ್ತ | ಗುತ್ತಿಗೆದಾರರ ಹೆಸರು | ಕೆಲಸದ ಆದೇಶದ ದಿನಾಂಕ | ಕಾಮಗಾರಿಯು ಮುಕ್ತಾಯವಾಗ ಬೇಕಾದ ದಿನಾಂಕ | ಕಾಮಗಾರಿಯು ಮುಕ್ತಾಯವಾದ/ ಮುಕ್ತಾಯ ವಾಗಬಹುದಾದ ದಿನಾಂಕ | ಆರ್ಥಿಕ ಪ್ರಗತಿ | ಭೌತಿಕ ಪ್ರಗತಿ | ವಿಳಂಬಕ್ಕೆ ಕಾರಣ |
|---|---|---|---|---|---|---|---|---|---|---|
| 1 | 2 | 3 | 6 | 7 | 8 | 9 | 10 | 11 | 12 | 13 |
| 2 | [illegible] | (ಅ) ಬ್ಯಾಂಡ್ ಸ್ಟ್ಯಾಂಡ್,ಇ - ಟಾಯ್ಲೆಟ್, ಫುಟ್ ಪಾಥ್, ಬೀದಿ ದೀಪಗಳು, ಮರ ನೆಡುವದು, ಮ್ಯೂಜಿಯಂ [illegible]ಬಸದಿ [illegible] | 646.30 ಲಕ್ಷ | ಎಸ್.ಎಂ.ಡಿ ಇಂಜನಿಯರ್ಸ್ ಅಂಡ ಕಾಂಟ್ರ್ಯಾಕ್ಟರ್ ಬೆಂಗಳೂರು | 04.08.2017 | 03.02.2019 | 30.09.2019 | **321.02 ಲಕ್ಷಗಳು** | **100%** | ಭಾರತೀಯ ಪುರಾತತ್ವ ಇಲಾಖೆಯಿಂದ ಹಾಗೂ ಅರಣ್ಯ ಇಲಾಖೆಯಿಂದ ಪರವಾಣಿಗೆ ಪಡೆಯಬೇಕಾಯಿತು, ಅದೇ ರೀತಿ ಕೆಲವಂದು ಸಾರ್ವಜನಿಕ ತಕರಾರುಗಳು, ಹಾಗು ಸಾಕಷ್ಟು ಉಸುಕು ಕಲ್ಲಿನ ಚಪ್ಪಡಿ ಕಲ್ಲುಗಳ ಅಲಭ್ಯತೆ ಕೆಲಸ ವಿಳಂಬಕ್ಕೆ ಕಾರಣವಾಯಿತು. ಗುತ್ತಿಗೆದಾರರ ವಿಳಂಬಕ್ಕೆ ರೂ. 1.23ಲಕ್ಷ ಎಲ್ ಡಿ ಹಾಕಲಾಗಿದೆ. |
| | | **(ಆ)** ಫುಟ್ ಪಾಥ್ ರೇಲಿಂಗ್ ಮತ್ತು ಬೀದಿ ದೀಪ ಬ್ಯಾಂಡ್ ಸ್ಟ್ಯಾಂಡ್,ಇ - ಟಾಯ್ಲೆಟ್ | 276.54 ಲಕ್ಷ | ಎಸ್. ಆರ್. ಸೂಳೆಭಾವಿ ವಿಜಯಪುರ | 06.03.2019 | 05.09.2019 | 31.03.2020 | **172.40 ಲಕ್ಷಗಳು** | **95%** | ಶೇಕಡಾ 95% ಕೆಲಸ ಮುಗಿದಿರುತ್ತದೆ. ಬಾಕಿ ಇರುವ 130 ಮೀ ಫುಟ್ ಪಾಥ್ ಮಾರ್ಚ- 2020 ರೊಳಗೆ ಕೆಲಸ ಮುಗಿಯುತ್ತದೆ. ಗುತ್ತಿಗೆದಾರರ ವಿಳಂಬಕ್ಕೆ ರೂ. 0.28 ಲಕ್ಷ ಎಲ್ ಡಿ ಹಾಕಲಾಗಿದೆ. |
| 3 | [illegible] | **(ಅ)** ಸಿವ್ಹಿಲ್ ಕಾಮಗಾರಿಗಳು | 85.02 ಲಕ್ಷ | ಎಸ್.ಎಂ.ಡಿ ಇಂಜನಿಯರ್ಸ್ ಅಂಡ ಕಾಂಟ್ರ್ಯಾಕ್ಟರ್ ಬೆಂಗಳೂರು | 30.08.2017 | 29.04.2018 | 31.07.2018 | **88.38 ಲಕ್ಷಗಳು** | **100%** | ಕಾಮಗಾರಿ ಮುಗಿದಿದೆ |

| ಕ್ರ. ಸಂ. | ಯೋಜನೆಯ ಹೆಸರು | ಉಪ ಕಾಮಗಾರಿಯ ಹೆಸರು | ಟೆಂಡರ ಅಗ್ರಿಮೆಂಟ ಮೊತ್ತ | ಗುತ್ತಿಗೆದಾರರ ಹೆಸರು | ಕೆಲಸದ ಆದೇಶದ ದಿನಾಂಕ | ಕಾಮಗಾರಿಯು ಮುಕ್ತಾಯವಾಗ ಬೇಕಾದ ದಿನಾಂಕ | ಕಾಮಗಾರಿಯು ಮುಕ್ತಾಯವಾದ/ ಮುಕ್ತಾಯ ವಾಗಬಹುದಾದ ದಿನಾಂಕ | ಆರ್ಥಿಕ ಪ್ರಗತಿ | ಭೌತಿಕ ಪ್ರಗತಿ | ವಿಳಂಬಕ್ಕೆ ಕಾರಣ |
|---|---|---|---|---|---|---|---|---|---|---|
| 1 | 2 | 3 | 6 | 7 | 8 | 9 | 10 | 11 | 12 | 13 |
| | | (ಅ) ಇಲೆಕ್ಟ್ರೀಕಲ್ ಕಾಮಗಾರಿಗಳು | 21.89 ಲಕ್ಷ | ಪ್ರಜ್ವಲ ಇಲೆಕ್ಟ್ರಕಲ್ಸ್ ಗದಗ | 06.03.2018 | 05.06.2018 | 5.06.2018 | 13.20 ಲಕ್ಷಗಳು | 100% | ಕಾಮಗಾರಿ ಮುಗಿದಿದೆ |
| | | (ಇ) ಬಯೋಗ್ಯಾಸ ಯುನಿಟ್ ಕಾಮಗಾರಿಗಳು | 37.50 ಲಕ್ಷ | ಸೆವೆನ್ ಕ್ಯುಬ್ ಪ್ರೈ.ಲಿ ದಾವಣಗೆರೆ | 04.07.2018 | 03.10.2018 | 31.05.2020 | 9.37 ಲಕ್ಷಗಳು | 80% | ಗುತ್ತಿಗೆದಾರರ ವೆಂಡರಗಳ ತೊಂದರೆ ಯಿಂದಾಗಿ ಮೆಶಿನರಿಗಳು ಬೇಗ ಪೂರೈಕೆ ಆಗಲಿಲ್ಲ ಆದ್ದರಿಂದ ವಿಳಂಬ ಆಗಿದೆ. ಈಗ ಸಿವಿಲ್ ಕಾಮಗಾರಿ ಮುಗಿದಿದೆ ಬಾಕಿ ಉಳಿದಿರುವ ಮಶೀನರಿ ಕೆಲಸಗಳು ಮೇ-.2020 ರೊಳಗೆ ಮುಗಿಯುತ್ತದೆ. ಗುತ್ತಿಗೆದಾರರ ವಿಳಂಬಕ್ಕೆ ರೂ. 3.75 ಲಕ್ಷ ಎಲ್ ಡಿ ಹಾಕಲಾಗಿದೆ. |
| | | (ಈ) ಬ್ಯಾಟರಿ ಚಾಲಿತ ಇ-ರಿಕ್ಷಾ ಒದಗಿಸುವ ಕಾಮಗಾರಿಗಳು | 6.25 ಲಕ್ಷ | ದೆಫಿನಸ್ ಅಟೋಮೋಟಿವ್ | 15.10.2018 | 14.01.2019 | 30.05.2019 | 5.25 ಲಕ್ಷಗಳು | 100% | ಕಾಮಗಾರಿ ಮುಗಿದಿದೆ. ಗುತ್ತಿಗೆದಾರರ ವಿಳಂಬಕ್ಕೆ ರೂ. 0.21ಲಕ್ಷ ಎಲ್ ಡಿ ಹಾಕಲಾಗಿದೆ. |
| | | (ಉ) ಮೆಸಿನರಿ ಯುನಿಟ ಕಾಮಗಾರಿಗಳು | 8.38 ಲಕ್ಷ | ಬಯೋ ರೆನ್ ಸೋಲ್ಯುಶನ್ಸ. ಮೈಸೂರು. | 07.07.2018 | 06.10.2018 | 19.03.2019 | 4.79 ಲಕ್ಷಗಳು | 100% | ಕಾಮಗಾರಿ ಮುಗಿದಿದೆ. ಗುತ್ತಿಗೆದಾರರ ವಿಳಂಬಕ್ಕೆ ರೂ. 0.21ಲಕ್ಷ ಎಲ್ ಡಿ ಹಾಕಲಾಗಿದೆ. |
| ಒಟ್ಟು ಬದಾಮಿ ಪುರಸಭೆಯು ಅನುಷ್ಠಾನ ಮಾಡುತ್ತಿರುವ ಕಾಮಗಾರಿಗಳು | | | 1124.18 ಲಕ್ಷಗಳು | | | | | 6.41 ಲಕ್ಷಗಳು | | ಎಲ್ಲ ಕೆಲಸಗಳು ಮುಕ್ತಯ ಹಂತಕ್ಕೆ ಬಂದಿದ್ದು ಮೇ-2020 ಎಲ್ಲ ಕೆಲಸಗಳು ಮುಗಿಯುತ್ತವೆ. |

In response, the Hon'ble Minister of State (I/C) for Housing and Urban affairs, GOI

II. ಸೆಂಟ್ರಲ್ ಪಿ ಡಬ್ಲ್ಯು ಡಿ ವತಿಯಿಂದ ವತಿಯಿಂದ ಅನುಷ್ಠಾನಗೊಳ್ಳುತ್ತಿರುವ ಕಾಮಗಾರಿಗಳ ವಿವರ:

| ಕ್ರ. ಸಂ | ಯೋಜನೆಯ ಹೆಸರು | ಉಪ ಕಾಮಗಾರಿಯ ಹೆಸರು | ಟೆಂಡರ ಅಗ್ರಿಮೆಂಟ ಮೊತ್ತ | ಗುತ್ತಿಗೆದಾರರ ಹೆಸರು | ಕೆಲಸದ ಆದೇಶದ ದಿನಾಂಕ | ಕಾಮಗಾರಿಯು ಮುಕ್ತಾಯವಾಗಬೇಕಾದ ದಿನಾಂಕ | ಕಾಮಗಾರಿಯು ಮುಕ್ತಾಯವಾದ/ ಮುಕ್ತಾಯವಾಗಬಹುದಾದ ದಿನಾಂಕ | ಆರ್ಥಿಕ ಪ್ರಗತಿ | ಭೌತಿಕ ಪ್ರಗತಿ | ವಿಳಂಬಕ್ಕೆ ಕಾರಣ |
|---|---|---|---|---|---|---|---|---|---|---|
| 1 | 2 | 3 | 6 | 7 | 8 | 9 | 10 | 11 | 12 | 13 |
| 1 | [illegible] | (ಅ) 2 ವರ್ತುಲ ಅಭಿವೃದ್ಧಿ ಕೆಲಸ, | 41.91 ಲಕ್ಷ | ಸೃಷ್ಟಿ ಅಸೋಸಿಯೇಟ್ಸ ದೆಹಲಿ | 07.09.2018 | 06.01.2019 | 30.04.2020 | 285.30 ಲಕ್ಷಗಳು | 80% | ಈ ಕಾಮಗಾರಿಗಳಿಗೆ ಪುರಸಭೆ ಬಾದಾಮಿ ವತಿಯಿಂದ ನಾಲ್ಕು ಬಾರಿ ಟೆಂಡರ ಕರೆದರೂ ಯಾವ ಗುತ್ತಿಗೆದಾರರು ಭಾಗವಹಿಸದ್ದರಿಂದ ಕೇಂದ್ರ ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ನಿರ್ದೇಶನದಂತೆ ದಿನಾಂಕ.09.07.2018 ರಂದು ಸೆಂಟ್ರಲ್ ಪಿಡಬ್ಲುಡಿಗೆ ಹಸ್ತಾಂತರಿಸಲಾಯಿತು. ನಂತರ ಸಿಪಿಡಬ್ಲುಡಿ, ಹುಬ್ಬಳ್ಳಿ ವಿಭಾಗದವರು ಟೆಂಡರ ಮೂಲಕ ಅನುಷ್ಠಾನಗೊಳಿಸುತ್ತಿದ್ದು ಈಗ ಕೆಲಸಗಳು ಮುಕ್ತಾಯ ಹಂತಕ್ಕೆ ಬಂದಿವೆ. |
| | | (ಆ) 180 ಪ್ಲಾನೆಜಗಳು | 139.93 ಲಕ್ಷ | ಸೃಷ್ಟಿ ಅಸೋಸಿಯೇಟ್ಸದೆಹಲಿ | 04.10.2018 | 03.01.2019 | 30.04.2020 | | | |
| | | (ಇ) 6 ಸ್ವಾಗತ ಕಮಾನುಗಳು ಸ್ಟೋನ್ ಕ್ಲ್ಯಾಡಿಂಗ ಕೆಲಸ. | 338.42 ಲಕ್ಷ | ಕುನಾಲ ಕನ್ಸ್ಟ್ರಕ್ಷನ್ ಘೋರಗಾಂವ, ಹರಿಯಾಣ | 11.10.2018 | 10.01.2019 | 30.04.2020 | | | |
| | | (ಈ) ಶೌಚಾಲಯ ಸಂಕೀರ್ಣ ಹಾಗೂ ಸ್ವಾಗತ ಕಮಾನುಗಳ ಸ್ಟ್ರಕ್ಚರಲ್ ಕೆಲಸ | 133.09 ಲಕ್ಷ | ಕುನಾಲ ಕನ್ಸ್ಟ್ರಕ್ಷನ್ ಘೋರಗಾಂವ, ಹರಿಯಾಣ | 12.10202 | 11.01.02019 | 30.04.2020 | | | |

| ಕ್ರ. ಸಂ | ಯೋಜನೆಯ ಹೆಸರು | ಉಪ ಕಾಮಗಾರಿಯ ಹೆಸರು | ಟೆಂಡರ ಅಗ್ರಿಮೆಂಟ ಮೊತ್ತ | ಗುತ್ತಿಗೆದಾರರ ಹೆಸರು | ಕೆಲಸದ ಆದೇಶದ ದಿನಾಂಕ | ಕಾಮಗಾರಿಯು ಮುಕ್ತಾಯವಾಗಬೇಕಾದ ದಿನಾಂಕ | ಕಾಮಗಾರಿಯು ಮುಕ್ತಾಯವಾದ/ ಮುಕ್ತಾಯವಾಗಬಹುದಾದ ದಿನಾಂಕ | ಆರ್ಥಿಕ ಪ್ರಗತಿ | ಭೌತಿಕ ಪ್ರಗತಿ | ವಿಳಂಬಕ್ಕೆ ಕಾರಣ |
|---|---|---|---|---|---|---|---|---|---|---|
| 1 | 2 | 3 | 6 | 7 | 8 | 9 | 10 | 11 | 12 | 13 |
| 2 | ಪಾರಂಪರಿಕ ಕಟ್ಟಡಗಳ ಮುಂಭಾಗದ ಅಭಿವೃದ್ಧಿ,ರಸ್ತೆ ಸೌಂದರ್ಯಕರಣ | ಪಾರಂಪರಿಕ 200 ಕಟ್ಟಡಗಳ ಮುಂಭಾಗದ ದುರಸ್ತಿ ಮತ್ತು ನವೀಕರಣ ಹಾಗು 6 ರಸ್ತೆಗಳ ಸೌಂದರ್ಯಕರಣ | 217.33 ಲಕ್ಷ | ಕುನಾಲ ಕನ್ಸ್ಟ್ರಕ್ಷನ್ ಘೊರಗಾಂವ, ಹರಿಯಾಣ | | | | | | ಈ ಕಾಮಗಾರಿಯನ್ನು ಕೂಡ ಸೆಂಟ್ರಲ್ ಪಿಡಬ್ಲ್ಯುಡಿಗೆ ಹಸ್ತಾಂತರಿಸಲಾಗಿತ್ತು ಸ್ಥಳೀಯರ ವಿರೋಧ ವ್ಯಕ್ತವಾದುದರಿಂದ, ದಿನಾಂಕ 15.03.2019 ರಂದು ದೆಹಲಿ ಹೃದಯ ಯೋಜನೆಯ ಮಿನಿಸ್ಟ್ರಿ ಆಫ್ ಹೌಸಿಂಗ ಆಂಡ ಅರ್ಬನ್ ಅಫೇರ್ಸ ನ ಅಂಡರ್ ಸೆಕ್ರೇಟರಿ ಇವರು ಬಾದಾಮಿಯ ಬೇಟಿ ಸಮಯದಲ್ಲಿ ಆದೇಶಿಸಿದಂತೆ ಕಾಮಗಾರಿಯನ್ನು ಕೈಬಿಡಲಾಯಿತು. |
| ಒಟ್ಟು ಸಿಪಿಡಬ್ಲುಡಿ ಅನುಷ್ಠಾನ ಮಾಡುತ್ತಿರುವ ಕಾಮಗಾರಿಗಳು | | | 870.69 ಲಕ್ಷಗಳು | | | | | 285.30 ಲಕ್ಷಗಳು | | |
| ಒಟ್ಟು ಮೊತ್ತ | | | 2044.36 ಲಕ್ಷಗಳು | | | | | 932.92 ಲಕ್ಷಗಳು | | |

## ಪೂರಕ ಟಿಪ್ಪಣಿ

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: | 1030 (1243)<br>ಸಮ್ಮುಖ II |
| ಮಾನ್ಯ ಸದಸ್ಯರ ಹೆಸರು: | ಶ್ರೀ. ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಯಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ: | 17-03-2020 |
| ಉತ್ತರಿಸಬೇಕಾದ ಸಚಿವರು: | ಮಾನ್ಯ ನಗರಾಭಿವೃದ್ಧಿ ಸಚಿವರು |

ಕೇಂದ್ರ ಪುರಸ್ಕೃತ "ಹೃದಯ್" ಯೋಜನೆಯು ದಿನಾಂಕ: 21.01.2015 ರಂದು ಜಾರಿಗೆ ಬಂದು, ಇದರಲ್ಲಿ ಭಾರತದ 12 ಪಾರಂಪರಿಕ ಪಟ್ಟಣಗಳು ಆಯ್ಕೆ ಆಗಿದ್ದು, ಅದರಲ್ಲಿ ಕರ್ನಾಟಕ ರಾಜ್ಯದ ಬದಾಮಿ ಪಟ್ಟಣವೂ ಸೇರ್ಪಡೆಯಾಗಿದ್ದು, ರೂ.22.26 ಕೋಟಿ ಅನುದಾನವನ್ನು ನಿಗದಿಪಡಿಸಲಾಗಿದೆ. ಕೇಂದ್ರ ಸರಕಾರದ ನಗರಾಭಿವೃದ್ಧಿ ಇಲಾಖೆಯಿಂದ ನೇಮಕಗೊಂಡ ಸಿಟಿ ಆಂಕರ "ಇಂಡಿಯನ್ ಹೆರಿಟೇಜ ಸಿಟಿ ನೆಟ್‌ವರ್ಕ್ ಫೌಂಡೇಶನ್, ಬೆಂಗಳೂರು." ಇವರು ಬದಾಮಿ ಪಟ್ಟಣದ "ಬದಾಮಿ ಸಿಟಿ ಹೃದಯ ಪ್ಲಾನ್" ಎಂಬ ಯೋಜನಾ ವರದಿಯನ್ನು ಅಕ್ಟೋಬರ್.2015 ಸಲ್ಲಿಸಿರುತ್ತಾರೆ. ಅದರಲ್ಲಿ ಪಾರಂಪರಿಕ ಪಟ್ಟಣ ಬದಾಮಿಗೆ ಅವಶ್ಯವಿರುವ ಮೂಲಸೌಕರ್ಯಗಳು ಹಾಗೂ ಬದಾಮಿಯ ಪ್ರವಾಸೋದ್ಯಮದ ಉತ್ತೇಜನಕ್ಕೆ ಹಾಗೂ ಪಟ್ಟಣದ ಪಾರಂಪರಿಕ ಅಂಶಗಳು ನಶಿಸಿ ಹೋಗದಂತೆ, ಕ್ರಮ ವಹಿಸಲು 6 ವಿವಿಧ ವಲಯಗಳಲ್ಲಿ, 17 ಅಭಿವೃದ್ಧಿ ಕಾಮಗಾರಿಗಳನ್ನು ಗುರ್ತಿಸಿರುತ್ತಾರೆ. ಅವುಗಳ ಪೈಕಿ, ಬದಾಮಿಗೆ ಬಿಡುಗಡೆಯಾದ ರೂ.22.26 ಕೋಟಿ ಅನುದಾನಕ್ಕೆ ಸೀಮಿತಗೊಳಿಸಿ ಆದ್ಯತೆಯ ಮೇರೆಗೆ ಮುಖ್ಯವಾದ 4 ಕಾಮಗಾರಿಗಳನ್ನು ಯೋಜನೆಯಡಿ ಕೈಗೆತ್ತಿಕೊಳ್ಳಲಾಗಿದೆ. ಅದರಂತೆ M/s. ದಾರಾಷಾ ಕಂಪನಿ ಲಿಮಿಟೆಡ್. ಚೆನ್ನೈ. ಇವರು ಸದರಿ ಕಾಮಗಾರಿಗಳಿಗೆ ವಿಸ್ತೃತ ಯೋಜನಾ ವರದಿಯನ್ನು ಅಂದಾಜು ರೂ.20.00 ಕೋಟಿಗೆ ಸಲ್ಲಿಸಿದ್ದು, ದಿನಾಂಕ. 20.06.2016 ರಂದು ನಡೆದ ಹೃದಯ ಯೋಜನೆಯ "ಹೃದಯ್ ನ್ಯಾಶನಲ್ ಎಂಪಾವರ್ ಕಮಿಟಿ" ಯ ಸಭೆಯಲ್ಲಿ ಸದರಿ ಕಾಮಗಾರಿಗಳ ಡಿಪಿಆರ್‌ಗಳಿಗೆ ಅನುಮೋದನೆ ನೀಡಲಾಗಿರುತ್ತದೆ.

**ಈ ಯೋಜನೆಯಲ್ಲಿ ಕೈಗೊಂಡಿರುವ ಕಾಮಗಾರಿಗಳ ವಿವರ ಕೆಳಕಂಡಂತಿದೆ:**

1. **ಬದಾಮಿ ಪಟ್ಟಣದ ಮುಖ್ಯರಸ್ತೆಗಳ ಹಾಗೂ ಸಂಚಾರಿ ಮೂಲಸೌಕರ್ಯ ಅಭಿವೃದ್ಧಿ. (ಅಂದಾಜು ಮೊತ್ತ ರೂ.13.76 ಕೋಟಿ).**

   ಬದಾಮಿ ಪಟ್ಟಣದ ಪ್ರವಾಸಿತಾಣಗಳಿಗೆ ಸಂಪರ್ಕಿಸುವ ರಸ್ತೆಗಳ ಅಭಿವೃದ್ಧಿ, ಫುಟಪಾತ್, ಸೈಕಲ್‌ಪಾತ್, ಬೀದಿ ದೀಪಗಳು, ಮರ ನೆಡುವುದು, ರೇಲಿಂಗ್, ಇ-ಶೌಚಾಲಯಗಳನ್ನು ಅಳವಡಿಸುವುದು, ಅಲ್ಲಲ್ಲಿ ನೀರು, ನೆರಳು, ವಿಶ್ರಾಂತಿಗೋಸ್ಕರ ಬ್ಯಾಂಡ ಸ್ಟ್ಯಾಂಡಗಳನ್ನು ನಿರ್ಮಿಸುವುದು, ರಸ್ತೆ ಸಂಚಾರಿ ಫಲಕ, ಸೂಚನಾ ಫಲಕ, ಮಾಹಿತಿ ಫಲಕಗಳು, ಪಟ್ಟಣದ ವರ್ತುಲಗಳ ಅಭಿವೃದ್ಧಿ, ಪಟ್ಟಣದ ಮುಖ್ಯ ರಸ್ತೆಗಳಿಗೆ ಪಾರಂಪರಿಕ ರೀತಿಯ ಸ್ವಾಗತ ಕಮಾನುಗಳ ನಿರ್ಮಾಣ ಹಾಗೂ ಪ್ರಸಿದ್ಧ ಪ್ರವಾಸಿ ತಾಣವಾದ ಬದಾಮಿಗೆ ಎಲ್ಲ ಆಧುನಿಕ ಅನುಕೂಲತೆಗಳುಳ್ಳ ಪಾರ್ಕಿಂಗ ಪ್ಲಾಜಾ ನಿರ್ಮಾಣದ ಕಾಮಗಾರಿಗಳು ಮಂಜೂರಾಗಿರುತ್ತದೆ.

ಅನುಬಂಧ-2

85

ANJUM PARWEZ, IAS
Secretary to Government
(Municipalities & UDAs)
Urban Development Department

Telephone: 22353942
22035079
Fax: 22280318
Karnataka Government Secretariat
No. 435, 4th Floor, Vikasa Soudha,
Bengaluru-560 001

No: KUIDFC / Hriday / S.R.PATNA / 2017-18 / 4526

Dated : 22-12-2017

To,

Sri DURGA SHANKER MISHRA, IAS,
Secretary (HUA) to Government,
Ministry of Housing and Urban Affairs,
Government of India,
Nirman Bhawan, Maulana Azad Road,
New Delhi - 110 011

Dear Sir,

**Sub:** Submission of the Proposal for inclusion of Srirangapatna under "HRIDAY" scheme of MoHUA reg.

**Ref:** Review meeting for flagship missions of MoHUA held under the chairmanship of Hon'ble Minister of state (I/C) for Housing and Urban affairs, GOI on 14-12-2017 at Bengaluru.

---

At the outset, I am thankful to the Ministry for conducting the review meeting of flagship missions of MoHUA under the chairmanship of Hon'ble Minister of State (I/C) for Housing and Urban affairs,GOI on 14-12-2017 at Bengaluru, which helped in fruitful discussions and consensus on the way forward for effective implementation of Central assistance Schemes.

Further, during the review meeting the Hon'ble Minister for Urban Development, Government of Karnataka made a request to approve a Heritage Rejuvenation project under "HRIDAY" for the heritage town of Srirangapatna in Mandya district of Karnataka. In response,the Hon'ble Minister of State (I/C) for Housing and Urban affairs, GOI was kind enough to agree for submission of a proposal by the state for the consideration of MoHUA .

In this regard I wish to submit the following for your kind perusal ;

"Srirangapatna" is an ancient town located on the banks of holy river "Cauvery" in Mandya district of Karnataka, near the heritage city of Mysore and is known for its religious, cultural and historic importance. The monuments of this island town have been nominated for "UNESCO WORLD HERITAGE SITE" with its application pending on tentative list of UNESCO.

The town is surrounded by river Cauvery to form an island town at an elevation of 679 m (2228feet) above MSL and is a major tourist/heritage town located on Bengaluru-Mysore road.

The town takes its name from celebrated "Ranganathaswamy temple", which is one of the most important Vaishnava centre of pilgrimage in south India. The temple is built by Ganga Dynasty rulers of the area in 9th century and further improved some three centuries later. Thus the temple is a medley of Hoysala and Vijayanagara style of temple architecture.Historic Melukote town linked to Vaishnava saint Ramanujacharya is located very near to Srirangapatna.

This town has since time immemorial been an urban centre and place of pilgrimage. During Vijayanagara empire, it became the seat of vice royalty. After the decline of Vijayanagara empire, the rulers of Mysore asserted their independence and Srirangapatna with seven tier stone fort was their prime acquisition

Srirangapatna continued to be the capital of Mysore under the kings Hyder Ali and Tippu Sultan. During Tippu's period the town flourished as cosmopolitan capital of this powerful state and various Indo–Islamic monuments such as Tippu's Palace, Darya Daulat, Jamia Masjid , armoury and many other heritage structures date from this period. The town remained part of the Mysore kingdom from 1610 AD till annexation of Mysore state into Indian republic after independence.

The Town has several heritage monuments, places of religious and historical importance like the Ranganatha swamy temple, fort, obelisk from British times, Gumbaj , Gosai Ghat, Nimishambha Temple and the Jamia Masjid to name a few.

Presently very few conservation works by state archeological department and signage works from state tourism department have been implemented. However the town offers huge scope for taking up extensive conservation & rejuvenation works for heritage monuments and to develop sustainable infrastructure for the benefit of tourists and citizens.

Hence, as desired by the Hon'ble Minister of State (I/C) for Housing and Urban affairs, GOI, the Detailed Project Report ( DPR) for implementation of Heritage Conservation, Rejuvenation and sustainable infrastructure development project in Srirangapatna town at an estimated cost of **Rs 4166.50 lakh** is submitted herewith for MoHUA approval under "HRIDAY" Scheme. If approved, the proposed works will be executed within a time span of 6 months.

83



I once again request your kind self to consider the proposal favorably and communicate the approval of ministry at the earliest.

Yours faithfully,

(Anjum Parwez)

Encl: Detailed Project Report

Copy to;

1. P.S to Hon'ble Minister for Urban Development, Government of Karnataka,Vikasa Soudha, Bengaluru. The matter may kindly be brought to the notice of Hon'ble Minister for his kind perusal and needful.

2. Ms.S.Rukmani, Director (Heritage cities), Ministry of Housing and Urban Affairs, Government of India, Room No-206, B-Wing , NIRMAN BHAVAN, Maulana Azad Road, New Delhi - 110 011. A copy of DPR is also enclosed for kind needful.